# ನೇತ್ರದಾನಕ್ಕೆ ರಾಜಣ್ಣ ಸ್ಫೂರ್ತಿ

> ''ನೇತ್ರದಾನ ಅಂದರೆ ಜೀವ ಇದ್ದಾಗಲೇ ಕಣ್ಣು ಕೊಡಬೇಕು ಅಂತ ನಾನಂದುಕೊಂಡಿದ್ದೆ. ಏನ್ ಮಹಾ ಬಿಡು, ಎರಡ್ ಕಣ್ಣಿದೆ ಅದರಲ್ಲಿ ಒಂದ್ ಕಣ್ಣನ್ನು ಕೊಟ್ಟುಬಿಡೋಣ ಅಂತ ನಿರ್ಧರಿಸಿದ್ದೆ. ಆದರೆ, ಸತ್ತ ಮೇಲೆ ಕಣ್ಣು ದಾನ ಮಾಡೋದು ಅಂದ್ರೆ ಯಾರ್ ತಾನೇ ಬೇಡ ಅಂತಾರೆ.



ಡಾ.ರಾಜ್‌ಕುಮಾರ್ ನೇತ್ರದಾನ ಪತ್ರಕ್ಕೆ ಸಹಿ ಹಾಕಿ ಡಾ. ಭುಜಂಗ ಶೆಟ್ಟಿ ಅವರಿಗೆ ಹಸ್ತಾಂತರಿಸಿದ ಸಂದರ್ಭ

ದೃಷ್ಟಿದೀಪ, ಬಣ್ಣ ಹಚ್ಚು...

ಆದರೆ ಈ ಗ್ಲಾಸ್ ಅನ್ನು ಇದುವರೆಗೆ ಕೃತಕವಾಗಿ ರೂಪಿಸಲು ಸಾಧ್ಯವಾಗಿಲ್ಲ. ಮುಂದೆ ಆಗಬಹುದೇನೊ ಗೊತ್ತಿಲ್ಲ. ಹೀಗಾಗಿ ಈ ಸಹಜ ಗ್ಲಾಸ್‌ಗೆ ಎಲ್ಲಿಲ್ಲದ ಬೇಡಿಕೆ. ಕಣ್ಣು ಸರಿಯಿದ್ದು, ಅದರ ಗ್ಲಾಸ್ ಮಾತ್ರ ಹಾನಿಯಾದ ಲಕ್ಷಾಂತರ ಮಂದಿಯೂ ನಮ್ಮ ದೇಶದಲ್ಲಿ ಇದ್ದಾರೆ. ಯಾರಾದರೂ ಕಣ್ಣಿನ ದಾನ ಮಾಡಿದರೆ ಮಾತ್ರ ಅವರಿಗೆ ದೃಷ್ಟಿ ಬರುವಂತೆ ಮಾಡಲು ಸಾಧ್ಯ. ಇಲ್ಲವಾದರೆ ಅವರು ಕತ್ತಲಲ್ಲೇ ಕೈತೊಳೆಯಬೇಕಾಗುತ್ತದೆ. ನಾನಾ ಕಾರಣಗಳಿಂದ ಕಾರ್ನಿಯಲ್ ಬ್ಲೈಂಡ್‌ನೆಸ್ ಬರುತ್ತದೆ. ಪೊರೆ ಬೆಳೆದಿದ್ದರೆ, ನರ ಸರಿಯಿಲ್ಲದಿದ್ದರೆ ಕುರುಡುತನ ಬರುತ್ತದೆ. ಕೆಲವು ಕಣ್ಣಿನ ಸಮಸ್ಯೆಗಳಿಗೆ ಪರಿಹಾರ ಇದೆ. ಇನ್ನೂ ಕೆಲವಕ್ಕೆ ಪರಿಹಾರವಿಲ್ಲ. ಅದಕ್ಕೆ ವಾಸಿಯಾಗಬಲ್ಲ / ಸರಿಪಡಿಸಬಲ್ಲ ಕುರುಡುತನ ಎಂದು ಕರೆಯಲಾಗುತ್ತದೆ. ಕಾರ್ನಿಯಲ್ ಬ್ಲೈಂಡ್‌ನೆಸ್ ವಾಸಿಯಾಗಬಲ್ಲ ಕುರುಡುತನ'.

### ಕಣ್ಣಿನ ಕಸಿ ಸವಾಲಿನ ಕೆಲಸ

ಮೃತರಿಂದ ನೇತ್ರಗಳನ್ನು ಸಂಗ್ರಹಿಸಿದ ಮೂರು ದಿನಗಳ ಒಳಗೆ ಅವುಗಳನ್ನು ಬೇರೊಬ್ಬರಿಗೆ ಕಸಿ ಮಾಡಬೇಕು. ಇಲ್ಲವಾದರೆ ಅವುಗಳು ವ್ಯರ್ಥವಾಗುತ್ತವೆ. ಇದು ಸಹ ವೈದ್ಯರಿಗೆ ಸವಾಲಿನ ಕೆಲಸ. ಮೊದಲೆಲ್ಲ 24 ಗಂಟೆಯಲ್ಲೇ ಮತ್ತೊಬ್ಬರಿಗೆ ಕಣ್ಣು ಕಸಿ ಮಾಡಬೇಕಿತ್ತು. ಆದರೆ ವಿಶೇಷ ದ್ರಾವಣ (ಸ್ಪೆಷಲ್ ಫ್ಲೂಯಿಡ್) ಲಭ್ಯವಿರುವುದರಿಂದ ಸಂಗ್ರಹಿಸಿದ ಕಣ್ಣುಗಳನ್ನು ಗರಿಷ್ಠ ಮೂರು ದಿನದವರೆಗೆ ಇಡಬಹುದು. ಈ ಮೂರು ದಿನಗಳಲ್ಲಿಯೇ ಸರದಿಯಲ್ಲಿರುವ ಅಂಧರನ್ನು ಕರೆಸಿ ಶಸ್ತ್ರಚಿಕಿತ್ಸೆ ಮಾಡಬೇಕು.

ಕಿಡ್ನಿ ಸೇರಿದಂತೆ ಕೆಲವು ಅಂಗಗಳ ಮರುಕಸಿ ಸಂದರ್ಭದಲ್ಲಿ ದಾನಿ ಹಾಗೂ ದಾನ ಪಡೆಯುತ್ತಿರುವ ವ್ಯಕ್ತಿಯ ರಕ್ತ ಹೊಂದಾಣಿಕೆ (ಬ್ಲಡ್ ಮ್ಯಾಚ್) ಆಗುವ ಅಗತ್ಯವಿದೆ. ಆದರೆ, ಕಣ್ಣಿಗೆ ಆ ಪದ್ಧತಿ ಇಲ್ಲ. ದಾನವಾಗಿ ಪಡೆದ ನೇತ್ರವನ್ನು ಪರಿಶೀಲಿಸಿ ಗ್ರೇಡಿಂಗ್ ಮಾಡಲಾಗುತ್ತದೆ. ಅದರ ಆಧಾರದ ಮೇಲೆ ಯಾರಿಗೆ ಯಾವ ಗ್ರೇಡ್‌ನ ಕಣ್ಣಿನ ಅಗತ್ಯವಿದೆಯೋ ಅಂತಹವರನ್ನು ಕೂಡಲೇ ಕರೆಸಿ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ.

ಮೊದಲೆಲ್ಲ ಒಂದು ಕಣ್ಣನ್ನು ಒಬ್ಬರಿಗೆ ಮಾತ್ರ ನೀಡಲಾಗುತ್ತಿತ್ತು. ಕಣ್ಣಿನಲ್ಲಿ ಫ್ರಂಟ್, ಮಿಡಲ್, ಬ್ಯಾಕ್ ಎಂಬ ಮೂರು ಲೇಯರ್‌ಗಳಿವೆ. ಕೆಲವರಿಗೆ ಮೇಲಿನ ಲೇಯರ್ ಮಾತ್ರ ಡ್ಯಾಮೇಜ್ ಆಗಿರುತ್ತದೆ. ಅಂಥವರಿಗೆ ಆ ಲೇಯರ್ ಅನ್ನು ಮಾತ್ರವೇ ಕಸಿ ಮಾಡಲಾಗುತ್ತದೆ. ಅದೇ ರೀತಿ ಅಂಧರಿಗೆ ಯಾವ ಲೇಯರ್ ಅಗತ್ಯವೋ ಆ ಲೇಯರ್ ಅನ್ನಷ್ಟೇ ಕಸಿ ಮಾಡಿ ದೃಷ್ಟಿ ಬರುವಂತೆ ಮಾಡುತ್ತಾರೆ ವೈದ್ಯರು. ಒಂದು ಕಣ್ಣನ್ನು ವಿವಿಧ ಹಂತಗಳಾಗಿ ಪ್ರತ್ಯೇಕಿಸಿ ಮೂವರಿಗೂ ಕಸಿ ಮಾಡಬಹುದು ಎಂಬುದು ಇತ್ತೀಚಿನ ಅಧ್ಯಯನದಿಂದ ಗೊತ್ತಾಗಿದೆ. ಅದು ಸದ್ಯ ಚಾಲ್ತಿಯಲ್ಲಿದೆ.

ಕಣ್ಣಿನ ಸಮಸ್ಯೆ ಎದುರಿಸುತ್ತಿರುವವರ ಪೈಕಿ ಶೇಕಡ 60–70ರಷ್ಟು ಮಕ್ಕಳೇ ಇದ್ದಾರೆ. ಕಾರ್ನಿಯಲ್ ಬ್ಲೈಂಡ್‌ನೆಸ್ ಮಕ್ಕಳಲ್ಲಿ ಹೆಚ್ಚಾಗಿ ಕಂಡು ಬರುತ್ತಿದೆ. ಇದಕ್ಕೆ ಕಾರಣ – ಸೋಂಕು, ಆಕಸ್ಮಿಕ ಗಾಯ, ಸಂಬಂಧಿಕರನ್ನೇ ಮದುವೆ ಆಗುವುದು, ಯಾವುದಾದರೂ ಆಗಿರಬಹುದು. ಯಾರಾದರು ಕಣ್ಣುಗಳನ್ನು ದಾನ ಮಾಡಿದರೆ ಮಾತ್ರ ಚಿಕ್ಕ ಚಿಕ್ಕ ಮಕ್ಕಳನ್ನು ಕತ್ತಲೆಯಿಂದ ಬೆಳಕಿಗೆ ಕರೆತರುವಂತಾಗುತ್ತದೆ. ಕಣ್ಣಿನ ಕಸಿ ವಿಚಾರದಲ್ಲಿ ಎಲ್ಲೆಡೆ ಮಕ್ಕಳಿಗೆ ಮೊದಲ ಆದ್ಯತೆ ನೀಡಲಾಗುತ್ತದೆ.

### ನೇತ್ರದಾನ ಜಾಗೃತಿ ಹಿನ್ನಡೆಗೆ ಕಾರಣಗಳು

- ಬಹುತೇಕರಿಗೆ ಕಣ್ಣಿನ ಮಹತ್ವ ಗೊತ್ತಿಲ್ಲ. ಹೀಗಾಗಿಯೇ ನೇತ್ರದಾನಕ್ಕೆ ಮುಂದಾಗದೆ ಕಣ್ಣುಗಳನ್ನು ವ್ಯರ್ಥ ಮಾಡುತ್ತಿದ್ದಾರೆ. 'ನೇತ್ರದಾನದ ಪ್ರಕ್ರಿಯೆ ತುಂಬ ಕ್ಲಿಷ್ಟಕರವಾದದ್ದು, ಅದಕ್ಕಾಗಿ ಮೊದಲೇ ಹೆಸರು ನೋಂದಾಯಿಸಿಕೊಳ್ಳಬೇಕು' ಎಂದು ಹಲವರು ಇಂದಿಗೂ ನಂಬಿದ್ದಾರೆ.